ಸ್ಥಾಪಿಸಿದರೆ ಕಾಡೂ ಉಳಿದು ಬೇಕಾದ ವಿದ್ಯುತ್ತೂ ಸಿಗುತ್ತದೆ ಎಂದು ಕೇಂದ್ರದಿಂದ ಕೈಗಾ ಅಣುಸ್ಥಾವರ ಯೋಜನೆಗೆ ಅಸ್ತು ಅನಿಸಿಕೊಂಡರು. ಯೋಜನೆಯ ಅನುಷ್ಠಾನಕ್ಕೆ ನಮ್ಮವರೇ ಆದ ಖ್ಯಾತ ವಿಜ್ಞಾನಿ ಡಾ. ರಾಜಾರಾಮಣ್ಣ ಸಜ್ಜಾಗಿ ನಿಂತಿದ್ದರು. ಅಣುಸ್ಥಾವರಗಳಿಂದ ಅಭಿವೃದ್ಧಿಯೇ ಹೊರತು ನಾಶವಲ್ಲ ಎನ್ನುವುದು ರಾಜಾರಾಮಣ್ಣನವರ ಪ್ರತಿಪಾದನೆ.

ಶಿವರಾಮ ಕಾರಂತ, ಪೇಜಾವರ ಸ್ವಾಮೀಜಿ, ದೆಹಲಿಯ ಪ್ರೊ. ಧೀರೇಂದ್ರ ಶರ್ಮ, ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೃಷ್ಣ ಅಯ್ಯರ್, ಹೈದರಾಬಾದಿನ ಎಂಜಿನಿಯರ್ ಟಿ. ಶಿವಾಜಿರಾವ್, ಇಂಗ್ಲೆಂಡಿನ ಪೀಟರ್ ಬುನ್ಯಾರ್ಡ್, ಆಸ್ಟ್ರೇಲಿಯಾದ ಹೆಲೆನ್ ಕಾಲ್ಡಿಕಾಟ್, ರೈಟ್ ಲೈವ್ಲಿಹುಡ್ ಪ್ರಶಸ್ತಿ ವಿಜೇತೆ ರೋಸಲಿಯ ಬರ್ಟಲ್ ಮುಂತಾದವರು ಕೈಗಾ ಯೋಜನೆಯ ವಿರುದ್ಧದ ಚಳವಳಿಯನ್ನು ಬೆಂಬಲಿಸಿ, ಅಣುವಿದ್ಯುತ್ ಸ್ಥಾವರದ ಅಪಾಯಗಳನ್ನು ವಿಶ್ವ ಮಾಧ್ಯಮಗಳ ಮುಂದೆ ಸಾದ್ಯಂತವಾಗಿ ವಿವರಿಸಿದರು.

## ‘ಕುದುರೆಮುಖ ಉಳಿಸಿ’ ಹೋರಾಟ

ಪಶ್ಚಿಮ ಘಟ್ಟಗಳ ಸಾಲಿನಲ್ಲೇ ಅತ್ಯಂತ ಸೂಕ್ಷ್ಮ ಹಾಗೂ ಸಂಪದ್ಭರಿತ ಪ್ರದೇಶವೆನಿಸಿರುವ ಕುದುರೆಮುಖ ಬೆಟ್ಟ ಪ್ರದೇಶ ಮತ್ತದರ ಶೋಲಾ ಕಣಿವೆಗಳು ಹಲವು ನದಿಗಳ ಉಗಮ ಸ್ಥಾನ ಮತ್ತು ಅಸಂಖ್ಯ ವನ್ಯಜೀವಿ ಪ್ರಭೇದಗಳ ಜೀವನಿಧಿ. ತುಂಗಾ, ಭದ್ರಾ, ಹೇಮಾವತಿ, ನೇತ್ರಾವತಿ, ಗುರುಪುರ ನದಿ, ಕುಪ್ಪನಹಳ್ಳಿಗಳಿಗೆ ಜನ್ಮ ನೀಡಿರುವ ಬೆಟ್ಟ ಪ್ರದೇಶದ ಮಳೆಕಾಡುಗಳು ವನ್ಯಪ್ರಾಣಿಗಳು, ಪಕ್ಷಿಗಳು, ಹೂ ಬಿಡುವ ಮರಗಳು, ವಿವಿಧ ಜಾತಿಯ ಮೀನುಗಳು, ಚಿಟ್ಟೆಗಳು, ಸರೀಸೃಪಗಳಿಗೆ ನೆಲೆ ಕಲ್ಪಿಸಿ, ವರ್ಷಕ್ಕೆ ಸರಾಸರಿ 700 ಸೆಂ.ಮೀ. ಮಳೆಯೊಂದಿಗೆ ಘಟ್ಟದ ಕೆಳಗಿನ ಐದಾರು ಜಿಲ್ಲೆಗಳ ಜೀವನಾಡಿಯಾಗಿತ್ತು ಮತ್ತು ಇಂದಿಗೂ ಆಗಿದೆ. ಇಂಥ ಸಶಕ್ತ ಹಸಿರಿನ ತಾಣ ಕುದುರೆಮುಖ, ಅದಿರು ಗಣಿಗಾರಿಕೆಯಿಂದ ಛಿದ್ರವಾಗಿ ತತ್ತರಿಸಿ ಹೋಗಿತ್ತು. 30 ವರ್ಷಗಳ ಲೀಸ್‌ನೊಂದಿಗೆ ಪ್ರಾರಂಭವಾದ ಅದಿರು ಕಂಪನಿಯ ಕೆಲಸ 1999ರವರೆಗೆ ಅಡೆತಡೆಯಿಲ್ಲದೆ ನಡೆಯಿತು. ವ್ಯಂಗ್ಯವೆಂದರೆ ಅಲ್ಲಿ ದೊರೆಯುತ್ತಿದ್ದ ಅದಿರು ಕಳಪೆ ಮಟ್ಟದ್ದಾಗಿದ್ದು, ಕೇವಲ ಶೇ. 30ರಷ್ಟು ಕಬ್ಬಿಣ ಇರುತ್ತಿತ್ತು. ಇದನ್ನು ಜಪಾನ್, ಚೀನಾ, ತೈವಾನ್‌ಗಳಿಗೆ ರಫ್ತು ಮಾಡುವ ಮುನ್ನ ಸಂಸ್ಕರಿಸಬೇಕಾಗುತ್ತಿತ್ತು. ಆ ಕೆಲಸಕ್ಕೆ ಅದಿರು ರಾಡಿಯನ್ನು ಮಂಗಳೂರಿನ ಸಂಸ್ಕರಣಾ ಘಟಕಕ್ಕೆ ಕೊಳವೆಯ ಮೂಲಕ ಕಳಿಸಬೇಕಿತ್ತು. ಅದಕ್ಕೆಂದೇ ದಟ್ಟ ಕಾಡಿನಲ್ಲಿ 67 ಕಿ.ಮೀ. ಉದ್ದದ ಕೊಳವೆ ಹಾಕಿ, ಅದರ ಮೂಲಕ ಅದಿರು ರಾಡಿಯನ್ನು ಸಾಗಿಸುವ ಏರ್ಪಾಟು ನಡೆಯಿತು. ಕಬ್ಬಿಣದ ಅಂಶ ಹೊರತುಪಡಿಸಿದ ಹೂಳು ಮಣ್ಣನ್ನು ತುಂಬಲು ಲಕ್ಯಾ ಕಣಿವೆಯಲ್ಲಿ ನಿರ್ಮಿಸಲಾದ ಲಕ್ಯಾ ಡ್ಯಾಂಗೆ ತುಂಬಲಾಗುತ್ತಿತ್ತು. 64 ಮೀ ಎತ್ತರದ ಡ್ಯಾಂನ ಎತ್ತರವನ್ನು ಪರವಾನಗಿ ಇಲ್ಲದೆ 100 ಮೀ.ಗೆ ಏರಿಸಿದ ಕಂಪನಿ



ಹೂಳನ್ನು ತುಂಬುತ್ತಾ ಹೋಯಿತು. 1994ರಲ್ಲಿ ಹೂಳಿನ ಒತ್ತಡದಿಂದಾಗಿ ಅಣೆಕಟ್ಟು ಬಿರುಕು ಬಿಟ್ಟಿತ್ತು. ಆಗ ಡ್ಯಾಂನ ಕೆಳ ಪಾತಳಿಯ 45 ಕಿ.ಮೀ. ಉದ್ದದವರೆಗೂ ವಾಸವಿದ್ದ ಜನರನ್ನು ಸ್ಥಳಾಂತರ ಮಾಡಲಾಯಿತು. ಅತ್ತ ಅದಿರಿನ ರಾಡಿ ಸಾಗಿಸುತ್ತಿದ್ದ ಪೈಪ್ ಹಲವು ಬಾರಿ ಸೋರಿ ಅಪಾರ ಪ್ರಮಾಣದ ರಾಡಿ ಮತ್ತು ಅದಿರು ದಟ್ಟ ಅರಣ್ಯದ ಗರ್ಭ ಸೇರುತ್ತಿತ್ತು. 2000 ಇಸವಿಯಲ್ಲಿ ನಾಲ್ಕು ಬಾರಿ ಸೋರಿಕೆಯಾಗಿ ಸುಮಾರು 4000 ಟನ್ ಸ್ಲರ್ರಿ ಅರಣ್ಯದ ತುಂಬೆಲ್ಲಾ ವ್ಯಾಪಿಸಿ ವನ್ಯ ಜೀವಿವೈವಿಧ್ಯಕ್ಕೆ ತುಂಬಾ ತೊಂದರೆಯಾಯಿತು. ಈ ಮಧ್ಯೆ 1987ರಲ್ಲಿ ಕುದುರೆಮುಖ ಅರಣ್ಯ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನ ಎಂದು ಘೋಷಿಸಿದ್ದರಿಂದ, ಅಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆ ನಡೆಸುವಂತಿರಲಿಲ್ಲ. ಕಂಪನಿ ಸರ್ಕಾರದ್ದೇ ಆಗಿದ್ದರಿಂದ ಅದು ಕ್ಯಾರೇ ಅನ್ನಲಿಲ್ಲ. ವಿರೋಧಿಸಿದ ಪರಿಸರ ಸಂಘಟನೆಗಳ ಬಾಯಿ ಮುಚ್ಚಿಸಲು 2000 ಎಕರೆ ಜಾಗದಲ್ಲಿ 80 ಲಕ್ಷ ಅಕೇಶಿಯ ಗಿಡಗಳ ನೆಡುತೋಪು ಬೆಳೆಸಿತು. 1999ರಲ್ಲಿ ಲೀಸ್ ಮುಗಿಯುತ್ತಿದ್ದಂತೆ ಇನ್ನೂ 20 ವರ್ಷಗಳ ಕಾಲ ಪರವಾನಗಿ ಪಡೆದ ಕಂಪನಿ, ಪರಿಸರವಾದಿಗಳು ವಿನಾಕಾರಣ ಅಭಿವೃದ್ಧಿಗೆ ಅಡ್ಡಗಾಲು ಹಾಕುತ್ತಿದ್ದಾರೆ ಎಂದು ಆಪಾದಿಸಿತ್ತು.

ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಜನ ಕಂಪನಿಯ ವಿರುದ್ಧ ಹೋರಾಟ ಪ್ರಾರಂಭಿಸಿ, ‘ಘಟ್ಟ ಪ್ರದೇಶ ಸರಿಪಡಿಸಲಾಗದ ದುರಂತದೆಡೆಗೆ ಸಾಗುತ್ತಿದೆ. ನದೀಮೂಲ ಬತ್ತುತ್ತಿದೆ’ ಎಂದು ಸರ್ಕಾರದ ಗಮನ ಸೆಳೆದರು. ‘ಘಟ್ಟದ ಯಾವ ಪ್ರದೇಶದಲ್ಲೂ ಗಣಿಗಾರಿಕೆ ನಡೆಸುವುದು ಅಪರಾಧವೆಂದು ನಾವು ಭಾವಿಸುತ್ತೇವೆ. ಗಣಿಗಾರಿಕೆಯಿಂದ ಆಗಿರುವ ಹಾನಿಯಿಂದ ನಮ್ಮ ಅರಣ್ಯ, ಭೂಮಿ, ಕಣಿವೆ, ನದಿಗಳು ಚೇತರಿಸಿಕೊಳ್ಳಲು ಶತಮಾನಗಳೇ ಬೇಕಾಗಬಹುದು. ಆದ್ದರಿಂದ ಯಾವ ಕಾರಣಕ್ಕಾಗಿಯೂ ಕುದುರೆಮುಖದ ಗಣಿಗಾರಿಕೆ ಮುಂದುವರೆಸಲು ಅನುಮತಿ ನೀಡಲೇಕೂಡದು’ ಎಂದು ಯು.ಆರ್. ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ, ಮೂರ್ತಿರಾವ್, ನಿಟ್ಟೂರು ಶ್ರೀನಿವಾಸರಾವ್, ಉಲ್ಲಾಸ್ ಕಾರಂತ, ತೇಜಸ್ವಿ, ಸುದರ್ಶನ್‌ರಂಥ ಮಹನೀಯರು ಆಗ್ರಹಿಸಿದರು. ಭಾರತೀಯ ವಿಜ್ಞಾನ ಸಂಸ್ಥೆ, ಅರಣ್ಯಕ್ಕೆ, ಅಣೆಕಟ್ಟುಗಳಿಗೆ ಆದ ಅಪಾಯಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಒದಗಿ ಬಂದ ಸತ್ಯಗಳನ್ನು ಪುಸ್ತಕ ರೂಪದಲ್ಲಿ ಸರ್ಕಾರಕ್ಕೆ ಅರ್ಪಿಸಿತು. ಗಣಿಗಾರಿಕೆಯ ಜಾಗ ಮಲ್ಲೇಶ್ವರ – ಗಂಗಡಿ ಕಲ್ಲು – ನೆಲ್ಲಿ ಬೀಡುಗಳಿಗೆ ವಿದ್ಯಾರ್ಥಿಗಳು, ನಿವೃತ್ತ ನ್ಯಾಯಾಧೀಶರು, ಪತ್ರಕರ್ತರು, ಲೇಖಕರು, ರೈತರು, ಪರಿಸರ ಸಂಘಟನೆಗಳು ಪಾದಯಾತ್ರೆ ಮಾಡಿ ಸರ್ಕಾರವನ್ನು ಪದೇ ಪದೇ ಒತ್ತಾಯಿಸಿದರು.

ಬೆಂಗಳೂರು ಮೂಲದ ‘ವೈಲ್ಡ್ ಲೈಫ್ ಫಸ್ಟ್’ ಸಂಘಟನೆಯ ಮ್ಯಾನೇಜಿಂಗ್ ಟ್ರಸ್ಟಿ ಪ್ರವೀಣ್ ಭಾರ್ಗವ್, ದೆಹಲಿ ಮೂಲದ ‘ಲಾ–ಇ’ ಎಂಬ ಸ್ವಯಂ ಸೇವಾ ಸಂಘಟನೆಯೊಂದಿಗೆ ಕೈ ಜೋಡಿಸಿ ಸುಪ್ರೀಂ ಕೋರ್ಟ್‌ನಲ್ಲಿ ಕೇಸು ಹಾಕಿ, ಪರಿಸರನಾಶದ ನಿರ್ದಿಷ್ಟ ಸಾಕ್ಷಿ–ಪುರಾವೆಗಳನ್ನೊದಗಿಸಿದರು.